ಎಂದರೆ ಹೇಗೆ ? ಅವಕಾಶ ಕೊಡಿ. ಇವತ್ತು ಸಕ್ಕರೆ ಕಾರ್ಖಾನೆಗಳು ೬ ಕೋಟಿ ನಷ್ಟದಲ್ಲಿ ನಡೆಯುತ್ತಿದೆ. ಅಲ್ಲಿ ಇವತ್ತು ೫೫ ಸಾವಿರ ಟನ್ ಕಬ್ಬನ್ನು ಅರೆದಿದ್ದಾರೆ. ಈ ವರ್ಷ ಒಂದು ಕಾಸನ್ನೂ ಕೊಡಲಿಲ್ಲವೆಂದರೆ ಅವರು ಕೋರ್ಟಿಗೆ ಹೋಗುತ್ತಾರೆ. ಮಾನ್ಯ ಪೋತದಾರ್‌ರವರು ಮಂತ್ರಿಗಳಾಗಿದ್ದಾಗ ಪೂರಾ ಹಣವನ್ನು ಕೊಡುತ್ತೇವೆನ್ನುವಂತಹ ಆಶ್ವಾಸನೆಯನ್ನು ಕೊಟ್ಟಿದ್ದರು. ಬೇಕಾದರೆ ತಾವು ವರದಿ ತೆಗೆದುನೋಡಿ. ಅವರು ಅಲ್ಲಿ ಧರಣಿಯನ್ನು ಮಾಡುತ್ತಿದ್ದಾರೆ. ಅವರಿಗೆ ನಾವು ಏನು ಉತ್ತರ ಕೊಡಬೇಕು ? ಆ ಕಾರ್ಖಾನೆ ಪ್ರಾರಂಭವಾಗುವುದಿಲ್ಲ. ಇದರಿಂದಾಗಿ ರೈತರಿಗೆ ಹಣವಿಲ್ಲದಂತಾಗುತ್ತದೆ. ವರಾಹಿ ಯೋಜನೆ ಬಂದರೆ ಅವರಿಗೆ ಅನುಕೂಲವಾಗುತ್ತದೆ. ಅರ್ಜಿಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸುವುದಿಲ್ಲ. ಇದೇ ನಿಮ್ಮ ನಿಲುವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಉತ್ತರದಲ್ಲಿ ವಿವರಗಳನ್ನೆಲ್ಲಾ ಕೊಟ್ಟಿದ್ದೇನೆ. ಮಾನ್ಯ ಪೊಯಿಲಿಯವರು ಹೇಳಿದ ಹಾಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇರತಕ್ಕಂತಹ ತೊಂದರೆ ಇದು. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ವರಾಹಿ ಯೋಜನೆಯನ್ನು ಪ್ರಾರಂಭ ಮಾಡುವಂತಹ ಹಂತದಲ್ಲಿ ಅವರ ಸರಕಾರವಿದ್ದಾಗ ಇದನ್ನು ಮಲ್ಟಿ ಪರ್‌ಪಸ್ ಯೋಜನೆಯನ್ನಾಗಿ ಮಾಡಬೇಕೆನ್ನುವ ಆಲೋಚನೆ ಬಂತು. ನಂತರ ಈಗ ಇದು ಕೊನೇ ಹಂತದಲ್ಲಿದೆ. We have finalised. we have agreed for minimum reserve forset. ಹತ್ತು ಅಡಿ ಸತತವಾಗಿ ನೀರು ಹೋಗತಕ್ಕಂಥಾದ್ದರ ಬಗ್ಗೆ ಅಲೈನ್‌ಮೆಂಟ್ ಅನ್ನು ಬದಲಾವಣೆ ಮಾಡಿದ್ದೇವೆ. ಇಲ್ಲದಿದ್ದರೆ ಕೇಂದ್ರ ಸರಕಾರ ಒಪ್ಪುವುದಿಲ್ಲ. ಅತಿ ಕಡಿಮೆ ರಿಸರ್ವ ಫಾರೆಸ್ಟ್ ಏರಿಯಾವನ್ನು ಮುಳುಗಡೆ ಮಾಡತಕ್ಕಂತಹ ಕೆಲಸವನ್ನು ಮಾಡದೇ ಹೋದರೆ ತೊಂದರೆಯಾಗುತ್ತದೆ. ತಜ್ಞರ ಅಭಿಪ್ರಾಯವನ್ನು ಪಡೆದು ಕೊಂಡು ಪ್ರೊಫಾರ್ಮಾವನ್ನು ಇನ್ನು ಒಂದು ವಾರದಲ್ಲಿ ಕೇಂದ್ರ ಸರ್ಕಾರಕ್ಕೆ ಕಳಿಸುವಂತಹ ಆಲೋಚನೆ ಮಾಡಿದ್ದೇವೆ. ಕೇಂದ್ರ ಸರಕಾರ ಕ್ಲಿಯರೆನ್ಸ್ ಮಾಡಿದರೆ ೫೦ ಲಕ್ಷ ಅಲ್ಲಿ ಅವಶ್ಯ ವಿದ್ದರೆ ೨–೩ ಕೋಟಿಯನ್ನು ಬೇಕಾದರೂ ಕೊಡಲಿಕ್ಕೆ ಸಿದ್ಧನಿದ್ದೇನೆ. ಟೆಂಡರ್ ಕರೆಯಲಿಕ್ಕೆ ಅಧಿಕಾರಿಗಳಿಗೆ ಹೇಳಿದ್ದೇನೆ. In anticipation of Government of India's approval, let them go with other work. ಸಕ್ಕರೆ ಕಾರ್ಖಾನೆಗೆ ಕೂಡ ಈ ಯೋಜನೆ ಮೇಲೆ ಎರಡು ಸಲ ಹಣವನ್ನು ಕೊಟ್ಟಿದ್ದೇವೆ ಅಲ್ಲದೆ ಗ್ಯಾರಂಟಿಯನ್ನು ಕೂಡ ಕೊಡುತ್ತಿದ್ದೇವೆ. ಸರಕಾರ ಇವರಿಗೆ ಹೆಚ್ಚು ಹಣ ಕೊಡುವುದಕ್ಕಿಂತ ಯೋಜನೆಯಲ್ಲಿ ಹಣವನ್ನು ಸೇರಿಸಿದರೆ ಸಕ್ಕರೆ ಕಾರ್ಖಾನೆಗಳಿಗೆ ಕೊಡತಕ್ಕಂತಹ ಹಣ ಉಳಿಯುತ್ತದೆ. ರೈತರ ಕಷ್ಟ ನಮಗೆ ಅರ್ಥವಾಗಿದೆ. ಸಕ್ಕರೆ ಕಾರ್ಖಾನೆಯನ್ನು ತೆರೆಯುವಾಗ ಎಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ ಆ ಪ್ರದೇಶವನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಕಾರ್ಖಾನೆಯನ್ನು ತೆರೆಯಬೇಕು. ಇದು ಎರಡೂ ಜೊತೆ ಜೊತೆಗೆ ಆಗಬೇಕು. ಇವತ್ತು ಸಕ್ಕರೆ ಕಾರ್ಖಾನೆ ಎಲ್ಲಿ ಇದೆ ಅಲ್ಲಿ ಸರಿಯಾದ ನೀರು, ಕಬ್ಬು ಇಲ್ಲದಂತಾಗಿದೆ. ಸೌತ್ ಕೆನರಾ ಮತ್ತು ಇನ್ನಿತರ ಕಡೆಗಳಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಅಲ್ಲಿ ಸಾಕಷ್ಟು ಕಬ್ಬು ಬೆಳೆಯತಕ್ಕಂತಹ ಪ್ರದೇಶ ಇಲ್ಲ. ಇದರಿಂದಾಗಿ ಅಲ್ಲಿನ ಸಕ್ಕರೆ ಕಾರ್ಖಾನೆಗಳಿಗೆ ನಷ್ಟವಾಗಿದೆ. ಸರಕಾರ ಅದನ್ನು ತುಂಬಬೇಕಾಗಿದೆ. ರೈತರ ಮತ್ತು ಸಕ್ಕರೆ ಕಾರ್ಖಾನೆ ಕಾರ್ಮಿಕರ ಬಗ್ಗೆ ಕೂಡ ಸರಕಾರ ಗಮನ ಕೊಡಬೇಕಾಗುತ್ತದೆ. ಇನ್ನು ಮುಂದೆ ಸಾಕಷ್ಟು ಕಬ್ಬು ಬೆಳೆಯದಿರುವ ಕಡೆಗೆ ಸಕ್ಕರೆ ಕಾರ್ಖಾನೆಯನ್ನು ಕೊಡಕೂಡದು ಎಂಬ ಅಭಿಪ್ರಾಯಕ್ಕೆ ನಾವು ಬಂದಿದ್ದೇವೆ. ಆದರೆ ಹಿಂದೆ ಏನು ಅನುಮತಿಯನ್ನು ಕೊಟ್ಟಿದ್ದೇವೆ ಆ ಕಾರ್ಖಾನೆಗಳ ಪರಿಸ್ಥಿತಿಯನ್ನು ಸರಿಪಡಿಸಬೇಕಾಗಿದೆ. ಇದೇ ವರ್ಷ ಈ ಯೋಜನೆಯನ್ನು ಪ್ರಾರಂಭ ಮಾಡಬೇಕೆಂಬ ಆಜ್ಞೆಯನ್ನು ಅಧಿಕಾರಿಗಳಿಗೆ ನೀಡುತ್ತೇನೆ.

೩) ನಂಜನಗೂಡು ತಾಲ್ಲೂಕಿನಲ್ಲಿರುವ ಜೆಮಿನಿಡಿಸ್ಟಿಲರಿಯಿಂದ ಹೊರ ಬರುತ್ತಿರುವ ಕಲ್ಮಿಷಗಳಿಂದ ದುರ್ನಾತ ಹಾಗೂ ಸುತ್ತಮುತ್ತಲಿರುವ ಹಳ್ಳಿಗಳ ಜನತೆಗೆ ಮತ್ತು ಪ್ರಾಣಿಗಳಿಗೆ ಆಗುತ್ತಿರುವ ತೊಂದರೆಯ ಬಗ್ಗೆ

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ನಂಜನಗೂಡು ತಾಲ್ಲೂಕಿನಲ್ಲಿರುವ ಜೆಮಿನಿ ಡಿಸ್ಟಿಲರಿಯಿಂದ ಹೊರ ಬರುತ್ತಿರುವ ಕಲ್ಮಷಗಳಿಂದ ದುರ್ನಾತ ಹಾಗೂ ಸುತ್ತಮುತ್ತಲಿರುವ ಹಳ್ಳಿಗಳ ಜನತೆಗೆ ಮತ್ತು ಪ್ರಾಣಿಗಳಿಗೆ ಆಗುತ್ತಿರುವ ತೊಂದರೆಯ ಬಗ್ಗೆ ಮಾನ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ. (ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಜಮಿನಿ ಡಿಸ್ಟಿಲರಿಯು ನಂಜನಗೂಡು ಚಾಮರಾಜನಗರ ರಸ್ತೆಯಲ್ಲಿ ನಂಜನಗೂಡಿಗೆ ೩ಕಿ.ಮೀ. ಅಂತರದಲ್ಲಿ ಸ್ಥಾಪಿತವಾಗಿದೆ. ಸದರಿ ಡಿಸ್ಟಿಲರಿಯು ಕಾಕಂಬಿಯನ್ನು ಖಚ್ಚಾ ಪದಾರ್ಥವನ್ನಾಗಿ ಉಪಯೋಗಿಸಿ ಆಲ್ಕೋಹಾಲನ್ನು ತಯಾರಿಸುತ್ತಿದೆ. ಇದು ಭಾರತದಲ್ಲಿ ತಯಾರಿಸಲ್ಪಟ್ಟ ವಿದೇಶಿ ಮಾದಕಪಾನೀಯಗಳನ್ನೂ ತಯಾರಿಸುತ್ತಿದ್ದು ಬಾಟ್ಲಿಂಗ್ ಸ್ಥಾವರವನ್ನು ಹೊಂದಿರುತ್ತದೆ.

ಈ ಹಿಂದೆ ಸದರಿ ಕೈಗಾರಿಕೆಗೆ ಕೈಗಾರಿಕಾ ಪ್ರದೇಶದಲ್ಲಿ ಸುಜಾತ ಟೆಕ್ಸ್‌ಟೈಲ್‌ನ ಹಿಂಭಾಗದಲ್ಲಿ ಜಾಗವನ್ನು ಕೊಡಲಾಗಿತ್ತು. ತೀವ್ರ ಜಲಪೂರಿತವಾದ ಗುಮಾನಿಯಿಂದಾಗಿ ಮಾಲಿನ್ಯ ನಿಯಂತ್ರಣ ಮಂಡಲಿಯು ಈ ಡಿಸ್ಟಿಲರಿ ಘಟಕವನ್ನು ಈಗಿನ ಜಾಗಕ್ಕೆ ಸ್ಥಳಾಂತರಿಸಿತು. ಸದರಿ ಉದ್ದಿಮೆಯು ತನ್ನ ಕಲುಷಿತ ನೀರನ್ನು ನದಿಗೆ ಬಿಡಲು ಯೋಗ್ಯವಾದ ಗುಣಮಟ್ಟದಲ್ಲಿ ಸಂಸ್ಕರಿಸಲು ತನ್ನ ಘಟಕಗಳನ್ನು ವಿನ್ಯಾಸಿಕೊಂಡಿದೆ. ನಂಜನಗೂಡು ಕೈಗಾರಿಕಾ ಕ್ಷೇತ್ರದಲ್ಲಿ ಸ್ಥಾಪಿಸಲ್ಪಟ್ಟಿರುವ ಕೈಗಾರಿಕೆಗಳು ಅವುಗಳಿಂದ ಹೊರಬರುವ ಕಲುಷಿತ ನೀರನ್ನು ನದಿಗೆ ಬಿಡಲು ಯೋಗ್ಯವಾದ ಗುಣ ಮಟ್ಟಕ್ಕೆ ಸಂಸ್ಕರಿಸಿ ಅಂತಹ ನೀರನ್ನು ಅವರಿಗೆ ಸಂಬಂಧಪಟ್ಟ ಭೂಮಿಯಮೇಲೆ ವ್ಯವಸಾಯಕ್ಕೆ ಉಪಯೋಗಿಸಬೇಕಾದುದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನೀತಿಯಾಗಿದೆ. ಈ ನೀತಿಯನ್ನು ಪಾಲಿಸಲು ಸದರಿ ಮಂಡಳಿಯು ಈ ಪ್ರಾಂತದ ಉದ್ದಿಮೆಗಳಿಗೆ ಬೇಕಾದ ಹೆಚ್ಚುವರಿ ಜಮೀನನ್ನು ಶಿಫಾರಸ್ಸು ಸಹ ಮಾಡಿರುತ್ತದೆ

ಸದರಿ ಜಮಿನಿ ಡಿಸ್ಟಿಲರಿ ಸಹ ತನ್ನ ಶುದ್ಧೀಕರಿಸಿದ ಕಲುಷಿತ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಲು ೮೨ ಎಕರೆ ಜಮೀನನ್ನು ಹೊಂದಿದ್ದು ಶುದ್ಧೀಕರಿಸಿದ ನೀರನ್ನು ತನ್ನದೇ ಆದ ಜಮೀನಿನ ಮೇಲೆ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದು ತನ್ನ ಜಮೀನಿನಲ್ಲಿ ಸೂಕ್ತ ತೋಟಗಾರಿಕೆ ಬೇಸಾಯ ಕೆಲಸ ಸಹ ಮಾಡುತ್ತಿದೆ. ಆದಾಗ್ಯೂ ಸಂಸ್ಕರಿಸಿ ವಿಸರ್ಜಿಸುತ್ತಿರುವ ನೀರು ನಿಗದಿಪಡಿಸಿದ ಗುಣಮಟ್ಟ ಹೊಂದದಿರುವುದರಿಂದ ಈಗಿನ ಸಮಸ್ಯೆಗಳು ಉದ್ಭವಿಸಿವೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸದರಿ ಉದ್ದಿಮೆಗೆ ಕಲುಷಿತ ನೀರನ್ನು ಸಂಸ್ಕರಿಸಲು ಎರಡು ಹಂತದ ಏರೋಬಿಕ್ ಸಂಸ್ಕರಣಾ ಘಟಕ ಮತ್ತು ಎರಡು ಹಂತದ ಏರೋಬಿಕ್ ಸಂಸ್ಕರಣಾ ಘಟಕಗಳನ್ನು ಅನುಮೋದಿಸಿದೆ. ಏರೋಬಿಕ್ ಘಟಕಗಳನ್ನು ಹೊಂದಿದ ಪ್ರತಿ ಡಿಸ್ಟಿಲರಿಯಿಂದ ಕಲುಷಿತ ನೀರನ್ನು ಶುದ್ಧೀಕರಿಸುವಲ್ಲಿ ಹೈಡ್ರೋಜನ್ ಸಲ್ಫೈಡ್ ಉತ್ಪತ್ತಿ ಆಗುತ್ತಿದ್ದು ಈ ಅನಿಲದಿಂದ ಉದ್ದಿಮೆಯು ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಲ್ಪಮಟ್ಟಿಗೆ ವಾಸನೆ ಇರುವುದು ಸಹಜ. ಈ ವಾಸನೆಯಿಂದ ಮಾನವನ ಆರೋಗ್ಯದ ಮೇಲೆ ಆಗುವ ಪರಿಣಾಮ ಬಹಳ ಕಡಿಮೆ. ಆದರೆ ಈ ವಾಸನೆಯು ಜನರಿಗೆ ಉಪದ್ರವವನ್ನು ಉಂಟುಮಾಡುತ್ತಿದೆ ಮತ್ತು ಈ ಉಪದ್ರವವು ಗಾಳಿ ಬೀಸುವ ದಿಕ್ಕಿನಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಾಗಿರುತ್ತದೆ. ಇಂತಹ ಸಂಸ್ಕರಣಾ ಘಟಕಗಳಿಂದ ಹೊರಬರುವ ವಾಸನೆಯನ್ನು ತಡೆಯಲು ಈಗ ಯಾವ ವಿಧವಾದ ತಂತ್ರಜ್ಞಾನದ ಅಭಾವ ಇರುತ್ತದೆ. ಆದರೆ ಸದರಿ ಸಂಸ್ಕರಣಾ ಘಟಕಗಳಲ್ಲಿ ಸೂಕ್ತ ರೀತಿಯಲ್ಲಿ "ಪಿ. ಪೆಚ್." ಅನ್ನು ಕಾಪಾಡಿದಲ್ಲಿ ವಾಸನೆಯ ಪ್ರಭಾವವನ್ನು ಕಮ್ಮಿ ಮಾಡಬಹುದಾಗಿದೆ. ಸದರಿ ಸಂಸ್ಥೆಯು ಈ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದೆ. ಆದರೂ ಸಹ ಈ ಘಟಕಗಳಿಂದ ಹೊರಬರುತ್ತಿರುವ ವಾಸನೆಯನ್ನು ತಡೆಯಲಾಗುತ್ತಿಲ್ಲ ಮತ್ತು ಈ ವಾಸನೆಯನ್ನು ಭರಿಸಲು ಅನಿವಾರ್ಯವಾಗಿದೆ.

ಕಳೆದ ಕೆಲವು ವರ್ಷಗಳಿಂದ ಕೈಗಾರಿಕೆಯ ಶುದ್ಧೀಕರಿಸಿದ ಕಲುಷಿತವನ್ನು ಭೂಮಿಯ ಮೇಲೆ ಉಪಯೋಗಿಸಲಾಗುತ್ತಿದೆ. ಶುದ್ಧೀಕರಿಸಿದ ಕಲುಷಿತಗಳನ್ನು ಭೂಮಿಯ ಮೇಲೆ ಉಪಯೋಗಿಸಿದ ಸ್ಥಳದಲ್ಲಿ ನೀರು ಕೆಳಮುಖವಾಗಿ ಹರಿಯುವ ಪ್ರದೇಶದಲ್ಲಿ ಕೆಲವು ಅಂತರ್ಜಲ ಮಾಲಿನ್ಯ ಸಮಸ್ಯೆಗಳು ಇತ್ತೀಚೆಗೆ ಉಂಟಾದವು, ಈ ಸಮಸ್ಯೆಯು ಮಾಲಿನ್ಯ ನಿಯಂತ್ರಣ ಮಂಡಳಿಯ ಗಮನಕ್ಕೆ ಬಂದಿದ್ದು ತೊಂದರೆಗೊಡಾದ ಎಲ್ಲಾ ಜನರಿಗೆ ಲಾರಿಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲು ಕಾರ್ಖಾನೆಗೆ ನಿರ್ದೇಶನ ನೀಡಲಾಗಿದೆ. ಅಂತರ್ಜಲ ಮಾಲಿನ್ಯ ಮತ್ತು ವಾಸನೆ ಸಮಸ್ಯೆಯನ್ನು ತಪ್ಪಿಸಲು ತೆರದ ಗುಂಡಿಗಳ ಬದಲು ಮೀತೇನ್ ರಿಕವರಿ ವಿಧಾನವನ್ನು ಸಂಸ್ಕರಣಾ ವಿಧಾನವನ್ನಾಗಿ ಅಳವಡಿಸಲು ಕಾರ್ಖಾನೆಗೆ ಮಂಡಳಿಯು ನಿರ್ದೇಶಿಸಿದೆ. ಸದರಿ ಮೀಥೇನ್ ರಿಕವರಿ ಸ್ಥಾವರ ಪೂರ್ಣಗೊಳ್ಳುವವರೆಗೆ ಎಲ್ಲಾ ತೊಂದರೆಗೊಡಾದ ಜನಗಳಿಗೆ ಶುದ್ಧ ಕುಡಿಯುವ ನೀರನ್ನು ಕಾರ್ಖಾನೆ ಸರಬರಾಜು ಮಾಡಲು ಮಂಡಳಿಯು ನಿರ್ದೇಶನ ನೀಡಿದೆ.

ಮನುಷ್ಯರು, ಭೂಮಿ ಮತ್ತು ಜಾನುವಾರುಗಳ ಮೇಲಿನ ಮಾಲಿನ್ಯತೆಯ ಪ್ರಭಾವಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ದೂರುಗಳು ಬಂದಿರುವುದಿಲ್ಲ. ಆದರೆ ಅಂತರ್ಜಲ ಕಲುಷಿತವಾದ ಬಗ್ಗೆ ದೂರುಗಳು ಬಂದಿದ್ದು ಇವುಗಳನ್ನು ಪರಿಹರಿಸುವಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಈಗಾಗಲೇ ಕ್ರಮ ಕೈಗೊಂಡಿದೆ.

ಪರಿಸ್ಥಿತಿಯನ್ನು ಉತ್ತಮಪಡಿಸಲು ಸದರಿ ಉದ್ದಿಮೆಗೆ ಈಗ ಶುದ್ಧೀಕರಿಸಿದ ಕಲುಷಿತ ನೀರನ್ನು ಉಪಯೋಗಿಸುತ್ತಿರುವ ಜಮೀನಿನ ಬದಲಾಗಿ ಅದೇ ಪ್ರದೇಶದಲ್ಲಿರುವ ಅವರದೇ ಆದ ೩೦-೪೦ ಎಕರೆ ವಿಸ್ತೀರ್ಣವುಳ್ಳ ಜಮೀನಿನ ಮೇಲೆ ಶುದ್ಧೀಕರಿಸಿದ ಕಲುಷಿತ ನೀರನ್ನು ಉಪಯೋಗಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ದ್ವಾರ ಆದೇಶಿಸಲಾಗುತ್ತಿದೆ. ಈ ಕ್ರಮದಿಂದಾಗಿ ಅಂತರ್ಜಲದ ಮಾಲಿನ್ಯತೆಯನ್ನು ಸ್ವಲ್ಪ ಮಟ್ಟಿಗೆ ತಡೆಯಬಹುದಾಗಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಉದ್ದಿಮೆಯು ಪತಿರಿಂದ ಸಂಸ್ಕರಣೆಯ ಘಟಕಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ಈ ಗಮನ ಸೆಳೆಯುವ ಸೂಚನೆಯ ಬಗ್ಗೆ ನಾನು ಕಳೆದ ಸಾರಿಯೂ ಪ್ರಸ್ತಾಪ ಮಾಡಿದ್ದೆ. ಆಗ ಮಾನ್ಯ ಸಚಿವರಾಗಿದ್ದಂಥ ಶ್ರೀಮಾನ್ ಜೆ. ಹೆಚ್. ಪಟೇಲರು ಇದರ ಬಗ್ಗೆ ಒಂದು ಆಯೋಗವನ್ನು ಹೊರಡಿಸಿ ಅಲ್ಲಿ ವಾತಾವರಣ ಕಲುಷಿತವಾಗಿದೆ ಎಂದು ಹೇಳಿದ್ದರು, ವಾಯುಮಾಲಿನ್ಯ ನಿಯಂತ್ರಣ ಮಂಡಳಿಯವರು ಕೂಡಾ ಇದನ್ನು ನೋಡಿ ಬಂದಿದ್ದಾರೆ. ಆದೆಲ್ಲಿ ಅಸಿಸ್ಟೆಂಟ್ ಕಮಿಷನರಾದಂಥ ಪುಟ್ಟಸ್ವಾಮಿಗೌಡರು ಆಲ್ಲಿ ಈ ಕಾರ್ಖಾನೆಯನ್ನು ಮುಚ್ಚಿಸಿದ್ದರು ಆಲ್ಲಿ ಕಾರ್ಖಾನೆಯನ್ನು ಮುಚ್ಚಿಸಿದ್ದು ಏತಕ್ಕೆಂದರೆ, ಅಲ್ಲಿ ವಾತಾವರಣ ಕಲುಷಿತವಾಗಿತ್ತು ಎಂಬುದರಿಂದಲೇ ಆ ಕಾರ್ಖಾನೆಯನ್ನು ಮುಚ್ಚಬೇಕಾಗಿ ಬಂತು ಎಂದು ವಾಯುಮಾಲಿನ್ಯ ಮಂಡಳಿಯವರು ಇದನ್ನು ಸಾದರಪಡಿಸಿರುತ್ತಾರೆ. ಇದನ್ನು ಮುಚ್ಚಿ ಸಮಾರು ಎರಡು ಮೂರು ತಿಂಗಳಾಯಿತು. ತದನಂತರ ಏನೋ ಪ್ರಭಾವವನ್ನು ತಂದು ೧೫ ಕಂಡೀಷನ್‌ಗಳನ್ನು ಹಾಕಿ ಮತ್ತೆ ಅಲ್ಲಿ ಕಾರ್ಯಾರಂಭ ಮಾಡಿದರು. ಮತ್ತೆ ಈಗ ಮೊದಲಿನ ಪರಿಸ್ಥಿತಿಯೇ ಇದೆ. ಈಗ ಅಲ್ಲಿ ಎರಡು ಕಡೆಯಲ್ಲಿ ತೊಂದರೆಯಿದೆಯೆಂದು ಒಪ್ಪಿಕೊಂಡಿರುತ್ತಾರೆ. ಇಲ್ಲಿ ಇದು ಯಾವ ರೀತಿಯ ಪರಿಣಾಮವನ್ನು ಬೀರುವುದಿಲ್ಲ ಎಂದು ಒಂದು ಕಡೆಯಲ್ಲಿ ಹೇಳುತ್ತಾರೆ. ಜಾನುವಾರುಗಳಿಗೆ ಎಷ್ಟೊಂದು ರೀತಿಯ ತೊಂದರೆಯಾಗುತ್ತಿದೆ ಎನ್ನುವುದನ್ನು ಮಾನ್ಯ ಸಚಿವರಾಗಿರುವ ಶ್ರೀ ವೀರಣ್ಣನವರೇ ಬಂದು ನೋಡಿದರೆ ಗೊತ್ತಾಗುತ್ತದೆ. ನಿಮ್ಮನ್ನೂ ಮತ್ತು ವಾಯುಮಾಲಿನ್ಯ ಮಂಡಳಿಯವರನ್ನು ಆಹ್ವಾನ ಮಾಡುತ್ತೇನೆ, ನೀವುಗಳು ಅಲ್ಲಿಗೆ ಬಂದು ಸ್ಥಳ ಪರೀಕ್ಷೆ ಮಾಡಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುವುದು ಒಳ್ಳೆಯದು. ಅಲ್ಲಿ ಏನೂ ಆಗುತ್ತಿಲ್ಲ ಎಂದು ಹೇಳುತ್ತೀರಿ, ಇದು ಒಂದು ರೀತಿಯ ಸ್ಲೋ ಪಾಯ್ಸನ್. ಒಂದೇ ಸಾರಿ ಎಲ್ಲರೂ ಸತ್ತು ಹೋಗುವುದಿಲ್ಲ. ಉದಾಹರಣೆಗೆ ಅದರ ಅಕ್ಕಪಕ್ಕದಲ್ಲಿ ಒಂದು ಕಿಲೋಮೀಟರ್ ದೂರದಲ್ಲಿರುವ ಒಂದು ಪೌಲ್ಟ್ರಿ ಫಾರಂನಲ್ಲಿ ಏನಾಗಿದೆ ಎಂದರೆ, ಅದು ಕಂಪ್ಲೀಟ್ ಆಗಿ ನಿರ್ನಾಮವಾಗಿದೆ. ಅಲ್ಲಿ ಒಂದು ಕೋಳಿ ಕೂಡಾ ಇಲ್ಲದ ಹಾಗೆ ಆಗಿದೆ. ಅಲ್ಲಿ ಒಂದು ಮಹಿಳಾ ವಿದ್ಯಾಪೀಠ ಬೇರೆ ಇದೆ, ಆ ವಿದ್ಯಾಪೀಠದಲ್ಲಿ ತೆಂಗು ಮತ್ತು ಬಾಳೆ ಇವುಗಳು ಕಂಪ್ಲೀಟ್ ಆಗಿ ಒಣಗಿ ಹೋಗಿದೆ. ಇಲ್ಲಿ ಅಂತರಜಲ ಏನು ಇದೆ, ಆದರೆ ಸತ್ತ ಇರತಕ್ಕಂಥ ಕೊಳವೆಬಾವಿಗಳು ಮತ್ತು ಬಾವಿಗಳು ಕೂಡಾ ಒಣಗಿ ಹೋಗುತ್ತಿವೆ. ಆದ್ದರಿಂದ ಇದನ್ನು ಕೂಡಲೇ ಮುಚ್ಚಿಸುವುದೇ ಕ್ಷೇಮ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಇದರ ಬಗ್ಗೆ ಸೂಕ್ತ ಕ್ರಮವನ್ನು ಕೂಡಾ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ನಾನು ಹೇಳುವುದು ಏನೆಂದರೆ, ಈ ಜೆಮಿನಿ ಡಿಸ್ಟಿಲರಿಯನ್ನು ಮುಚ್ಚಿಸುವುದು ಕ್ಷೇಮ. ಅದರ ಪರವಾನಗಿಯನ್ನು ರದ್ದು ಪಡಿಸಿ ಮುಚ್ಚಿಸಿದರೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಸಾಯಂಕಾಲ ಅಲ್ಲಿಗೆ ಹೋಗುವುದಕ್ಕೆ ಆಗುವುದಿಲ್ಲ. ಅಲ್ಲಿ ಬರತಕ್ಕ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ದಯವಿಟ್ಟು ಅದನ್ನು ಮುಚ್ಚಿಸುವುದಕ್ಕೊಸ್ಕರವಾಗಿ ಸರ್ಕಾರ ತೀವ್ರವಾದ ಗಮನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ.—ಮಾನ್ಯ ಸದಸ್ಯರು ಬಹಳ ಉತ್ತಮವಾದ ಸೂಚನೆಯನ್ನು ಕೊಟ್ಟಿದ್ದಾರೆ. ಮಂತ್ರಿಗಳು ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳು, ನಾನು ಸಹ ಹೋಗಿ ಅಲ್ಲಿ ಯಾವ ರೀತಿ ತೊಂದರೆಯಾಗುತ್ತಿದೆ ಮತ್ತು ಪರೀಕ್ಷೆ ಮಾಡಿ ಎಷ್ಟರ ಮಟ್ಟಿಗೆ ಅದನ್ನು ತಡೆಗಟ್ಟಬಹುದು, ಎಷ್ಟರಮಟ್ಟಿಗೆ ಅದನ್ನು ತಡೆಗಟ್ಟಲಿಕ್ಕೆ ಸಾಧ್ಯವಿದೆ ಎಂಬುದನ್ನು ನೋಡಿದ ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್. – ಮಾನವೀಯತೆಯನ್ನು ಒಪ್ಪಿಕೊಂಡು ಸಂಸ್ಕರಣ ಘಟಕವನ್ನು ಮಾಡಿದ್ದಾರೆ. ಅಸೆಂಬ್ಲಿ ಸಂದರ್ಭದಲ್ಲಿ ಸಂಸ್ಕರಣ ಘಟಕವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ.....

ಅಧ್ಯಕ್ಷರು. – ಅವರು ಆಗಲೇ ಉತ್ತರ ಹೇಳಿದ್ದಾರೆ...

ಶ್ರೀ ಡಿ. ಟಿ. ಜಯಕುಮಾರ್. – ಸಂಸ್ಕರಣ ಘಟಕ ಏನು ಇದೆ ಅದನ್ನು ಅಸೆಂಬ್ಲಿ ನಡೆಯುವ ಕಿಸವಯದಲ್ಲಾದರೂ ಉಪಯೋಸುವುದೇನೆಂದರೆ ಸಾ ಗಾರು ರೂಪಾಯಿ ಖರ್ಚು ಆಗುತ್ತಿದೆ. ಇವರು ಟ್ಟಿರುವ ಉತ್ತರ ಸಮರ್ಪಕವಾಗಿಲ್ಲ. ಅದನ್ನು ಮುಚ್ಚಿಸುವುದಕ್ಕೆ ಏನಾದರೂ ಕ್ರಮ ತೆಗೆದು ಕೊಳ್ಳುವುದು.

ಅಧ್ಯಕ್ಷರು. – ಉತ್ತರ ಬರಾಬರಿ ಹೇಳಿದ್ದಾರೆ.

ಶ್ರೀ ವೀರಣ್ಣ. – ಅಸೆಂಬ್ಲಿ ಆದ ಮೇಲೆ ನಂಜನಗೂಡಿಗೆ ನನ್ನ ಮೊದಲ ಭೇಟಿ. ಒಬ್ಬನೇ ಅಲ್ಲ, ಟೀಮ್ ಜೊತೆ. ಸಂಬಂಧಪಟ್ಟ ಅಧಿಕಾರಿಗಳು, ಎಲ್ಲರೂ ಹೋಗುತ್ತೇವೆ. ನಮ್ಮ ಜೊತೆ ಜಯ ಕುಮಾರ್‌ರವರು ಬರುತ್ತಾರೆ.

ಶ್ರೀ ಡಿ. ಟಿ. ಜಯಕುಮಾರ್. – ಒಬ್ಬರನ್ನು ಉದ್ಧಾರ ಮಾಡುವುದಕ್ಕೋಸ್ಕರ ಸಾವಿರಾರು ಜನರು ಸಾಯುತ್ತಿದ್ದಾರೆ.

ಅಧ್ಯಕ್ಷರು. – ವಿನಯ್‌ಕುಮಾರ್ ಸೊರಕೆ:

ಡಾ॥ ಮಾಹದೇವಪ್ಪ. – ಮಾನ್ಯ ಅಧ್ಯಕ್ಷರೇ, ಇದೇ ರೀತಿಯ ಪ್ರಶ್ನೆಯನ್ನು ಎರಡು ಮೂರು ವರ್ಷಗಳ ಹಿಂದೆ ಇಲ್ಲಿ ಪ್ರಸ್ತಾಪಿಸಿದಾಗ ಸರ್ಕಾರ ಇದನ್ನು ಒಪ್ಪಿಕೊಂಡಿದೆ. ಹೈಡ್ರೋಜನ ಸಲ್ಫೈಡ್ ಇರುವುದರಿಂದ ವಾತಾವರಣ ಕಲುಷಿತವಾಗಿ ವಾಸನೆಯಾಗುತ್ತಿದೆ. ಇಲ್ಲಿ ವಿಚಾರ ಪ್ರಸ್ತಾಪ ಮಾಡು ವುದು ಏನೆಂದರೆ ಮನುಷ್ಯನ ಮಲ ಮೂತ್ರ ವಿಸರ್ಜನೆ ವಾಸನೆಯಿಂದ ಕೂಡಿದ್ದರೆ ಅದು ಆರೋಗ್ಯಕ್ಕೆ ಹಾನಿಕಾರಕ ಅಲ್ಲವೆಂದು ಹೇಳಿದರೆ, ಅದರ ಪಕ್ಕದಲ್ಲಿ ಕುಳಿತು ಅನ್ನವನ್ನು ತಿನ್ನುವುದಕ್ಕೆ ಸಾಧ್ಯವಾಗು ತ್ತದೆಯೇ ? ಇಂತಹ ಪರಿಸ್ಥಿತಿಯಲ್ಲಿ ಆ ಫ್ಯಾಕ್ಟರಿಯ ಸುಮಾರು ೧೦–೧೫ ಕಿಲೋಮೀಟರ್ ವ್ಯಾಪ್ತಿ ಯಲ್ಲಿ ದುರ್ನಾತದಿಂದ ಕೂಡಿರುತ್ತದೆ. ಜೊತೆಯಲ್ಲಿ ಲಾರಿಯಲ್ಲಿ ನೀರು ತಂದು ಕೊಡುತ್ತಾರೆ. ಅಲ್ಲಿ ನೀರಾವರಿ ಯೋಜನೆ ಇದೆ, ಆದರೂ ಲಾರಿಯಲ್ಲಿ ನೀರು ತಂದು ಕೊಡುತ್ತಾರೆ. ಲಕ್ಷಾಂತರ ರೂಪಾಯಿ ಉತ್ಪತ್ತಿ ಇದೆ. ಮಹಿಳಾ ವಿದ್ಯಾರ್ಥಿ ನಿಲಯ ಇದೆ. ಅಂತರ್ಜಲ ಕೂಡ ಪೂರ್ತಿಯಾಗಿ ಕಲುಷಿತವಾಗಿ ಬೇಸಾಯಕ್ಕೆ ಇವೊತ್ತು ಅದು ಲಭ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ದವರು ಎರಡು ವರ್ಷದ ಹಿಂದೆ ಅಶ್ವಾಸನೆಯನ್ನು ಕೊಟ್ಟಿದ್ದರು. ಪರವಾನಗಿಯನ್ನು ರದ್ದು ಮಾಡುತ್ತೆ ವೆ ಎಂದು ಆದರೆ ಎರಡು ವರ್ಷವಾದರೂ ಏನೂ ಕಾರ್ಯಕ್ರಮ ತೆಗೆದುಕೊಳ್ಳದಿರುವುದು ಶೋ ಚನೀಯವಾದ ವಿಚಾರ. ಪೊಲ್ಯೂಷನ್ ಕಂಟ್ರೋಲ್ ಬೋ ರ್ಡ್‌ನವರು ಅಲ್ಲಿಗೆ ವಿಸಿಟ್ ಮಾಡು ತ್ತಾರೆ. ಆದರೆ ಅವರು ಅಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ. ರಾಮಪುರಕ್ಕೆ ನೀರು ಬಿಡುತ್ತಾರೆ. ಅಲ್ಲಿ ದನಕರುಗಳು ಸಾಯುತ್ತಿವೆ. ಸುಜಾತ ಟೆಕ್ಸ್‌ಟೈಲ್ಸ್‌ನವರು ಕಬಿನಿ ನಾಲೆಗೆ ನೀರು ಬಿಡುತ್ತಾರೆ. ಆ ನೀರು ಕಲುಷಿತವಾಗಿ ಪರಿಸ್ಥಿತಿ ಗಂಭೀರವಾಗಿದೆ. ಇವರ ಸೂಕ್ತ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಅಲ್ಲಿನ ಜನರು ನೆಮ್ಮದಿಯಿಂದ ಶುದ್ಧವಾದ ಗಾಳಿಯನ್ನು ತೆಗೆದುಕೊಂಡು, ತಮ್ಮ ಉಸಿರಾಟಕ್ಕೆ ಶುದ್ಧವಾದ ಗಾಳಿಯನ್ನು ಸೇವನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವೀರಣ್ಣ. – ಮಾನ್ಯ ಸದಸ್ಯರು ಹೇಳುವಂತೆ ಅಲ್ಲಿ ಮಾಲಿನ್ಯ ಆಗುತ್ತದೆ. ಸ್ವಲ್ಪ ಮಟ್ಟಿಗೆ ವಾಸನೆ ಆಗುತ್ತದೆ ಜನಗಳಿಗೆ ತೊಂದರೆ ಆಗುತ್ತದೆ ಎನ್ನುವ ವಿಷಯ ನಿರ್ವಿವಾದ. ಅದನ್ನು ತಡೆಗಟ್ಟಲು ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ನಮ್ಮ ಮುಂದಿರತಕ್ಕ ಸಮಸ್ಯೆ ಎಂದರೆ, ಗಾಯವಾಗಿದ್ದ ಕೈಯನ್ನು ಕತ್ತರಿಸಿ ಹಾಕುವುದು ನ್ಯಾಯಸಮ್ಮತ ವಾದುದು ಅಲ್ಲ, ಗಾಯವನ್ನು ವಾಸಿ ಮಾಡುವಾಗ ಇಡೀ ಕೈಯನ್ನು ತೆಗೆಯಬೇಕೆಂದು ಹೇಳತಕ್ಕದ್ದು ಸಹ ನ್ಯಾಯಸಮ್ಮತವಲ್ಲ. ಡಾ॥ ಮಾಹದೇವಪ್ಪನವರನ್ನು ಹಾಗೂ ಜಯಕುಮಾರ್ ಅವರನ್ನು ಮತ್ತು ಜಲಮಾಲಿನ್ಯ ಅಧಿಕಾರಿಗಳನ್ನು ಕರೆಸಿಕೊಂಡು, ಮಾತನಾಡಿ ಕಲುಷಿತ ನೀರನ್ನು ಜಮೀನಿಗೆ ಬಿಡದ ಹಾಗೆ ಸಂಸ್ಕರಣ ಕಾರ್ಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಟಿ. ಜಯಕುಮಾರ್. – ಸರ್ಕಾರ ಕ್ರಮ ತೆಗೆದುಕೊಂಡಿದೆ. ಆದರೆ ಅವರು ಕೇರ್ ಮಾಡುತ್ತಿಲ್ಲ.

ಅಧ್ಯಕ್ಷರು.—ಅವತು ನಿಮ್ಮನ್ನೂ ಜೊತೆಗೆ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿದ್ದಾರಲ್ಲ.....

ಶ್ರೀ ಡಿ. ಟಿ. ಜಯಕುಮಾರ್.—ಕಂಪ್ಲೈಂಟ್ ಬಂದಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಾರೆ. ಡಿಸ್ಟಿಲರಿ ಕಂಪನಿ ವಿರುದ್ಧ ಕೋರ್ಟಿನಲ್ಲಿ ಪ್ರೈವೇಟ್‌ನವರು ಕಂಪ್ಲೈಂಟ್ ಮಾಡಿದ್ದಾರೆ. ಕೋರ್ಟಿನಲ್ಲಿ ಕೇಸ್ ಪೆಂಡಿಂಗ್ ಇದೆ.

ಅಧ್ಯಕ್ಷರು.—ನಿಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇವೆಂದು ಹೇಳಿದ್ದಾರೆ, ಆಗ ಹೇಳಿ.....

ಶ್ರೀ ಡಿ. ಟಿ. ಜಯಕುಮಾರ್.—ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

೨-೦೦ ಪಿ.ಎಂ.

ಶ್ರೀ ಎಂ. ರಾಮಪ್ಪ.—ಇಲ್ಲಿ ಸರ್ಕಾರ ಅಂದರೆ ಜಯಕುಮಾರ್‌ರವರೆ ಅಥವಾ ಮಂತ್ರಿ ವರ್ಯರೇ? ಅದು ಏನಾದರೂ ಇದ್ದರೆ ಹೇಳಿ,, ಹೊರಗಡೆ ಬರಲಿ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ, ಪುತ್ತೂರಿನಲ್ಲಿ ನಿರ್ಮಿಸಲಾಗಿರುವ ಮಾರುಕಟ್ಟೆಗೆ ಸುಮಾರು ಆರೇಳು ಕಿಲೋಮೀಟರುಗಳಷ್ಟು ಬಳಸಿ ಹೋಗಬೇಕಾಗಿದ್ದು ಅದರಿಂದ ರೈತರಿಗೆ ಆಗಿರುವ ತೊಂದರೆ ಹಾಗೂ ಸದರಿ ಮಾರುಕಟ್ಟೆಗೆ ರಸ್ತೆ ನಿರ್ಮಾಣ ಮಾಡುವವರೆಗೆ ಹಾಲಿ ಪುತ್ತೂರು ಪೇಟೆಯಲ್ಲಿರುವ ಹಳೆ ಮಾರುಕಟ್ಟೆ ಕೇಂದ್ರವನ್ನೇ ಅಧಿಕೃತ ಮಾರುಕಟ್ಟೆ ಕೇಂದ್ರವನ್ನಾಗಿ ಪರಿಗಣಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಗ್ರಾಮಾಭಿವೃದ್ಧಿ ಪಂಚಾಯ್ತಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಇದನ್ನು ಸೋಮವಾರ ತೆಗೆದು ಕೊಳ್ಳೋಣ.

ಅಧ್ಯಕ್ಷರು.—ಇದನ್ನು ಸೋಮವಾರ ತೆಗೆದುಕೊಳ್ಳೋಣ. ಈಗ ಜೆ. ಹೆಚ್. ಪಟೇಲರು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ, ಅವರು ಏನು ಸ್ಟೇಟ್‌ಮೆಂಟ್ ಮಾಡುತ್ತಾರೆ ಅದು ಮೊದಲೇ ಪೇಪರಿನಲ್ಲಿ ಬಂದು ಬಿಟ್ಟಿದೆ.

ತುಂಗಭದ್ರಾ ಅಚ್ಚುಕಟ್ಟಿನ ಬೆಳೆಗಳಿಗೆ ನೀರು ಸರಬರಾಜು ಮಾಡುವ ಬಗ್ಗೆ ಮಂತ್ರಿಯವರಿಂದ ಹೇಳಿಕೆ

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ವಿವಿಧೋದ್ದೇಶ ಆಂತರ ರಾಜ್ಯ ಯೋಜನೆಯು ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ನೀರಾವರಿ ಮತ್ತು ಜಲವಿದ್ಯುತ್ ಅವಶ್ಯಕತೆಗಳನ್ನು ಪೂರೈಸುತ್ತದೆ. ಸಾಧಾರಣ ವರ್ಷಗಳಲ್ಲಿ ಈ ಯೋಜನೆಯಡಿಯಲ್ಲಿ ೨೩೦ ಟಿಎಂಸಿ ನೀರನ್ನು ಉಪಯೋಗಿಸಲು ಅವಕಾಶವಿದೆ. ಆದರೆ ಈ ವರ್ಷ ದೊರಕಬಹುದಾದ ನೀರು ಕೇವಲ ೧೭೪ ಟಿ. ಎಂ. ಸಿ. ಎಂದು ಅಂದಾಜು ಮಾಡಲಾಗಿದೆ. ಅಂದರೆ, ಸಾಧಾರಣ ವರ್ಷದಲ್ಲಿ ದೊರೆಯುವ ನೀರಿಗಿಂತ ೫೬ ಟಿ. ಎಂ. ಸಿ. ಯಷ್ಟು ಕಡಿಮೆ ನೀರು ದೊರೆಯುತ್ತದೆ. ಸಾಧಾರಣ ವರ್ಷದಲ್ಲಿ ಕರ್ನಾಟಕ ರಾಜ್ಯಕ್ಕೆ ದೊರೆಯಬಹುದಾದ ಸುಮಾರು ೧೫೧ ಟಿ. ಎಂ. ಸಿ. ನೀರಿಗೆ ಬದಲಾಗಿ, ಈ ವರ್ಷ ದೊರೆಯುವ ನೀರಿನ ಪ್ರಮಾಣವು ಸುಮಾರು ೧೦೫ ಟಿ. ಎಂ. ಸಿ. ಅಂದರೆ ೪೬ ಟಿ. ಎಂ. ಸಿ. ಕಡಿಮೆ.

ತುಂಗಭದ್ರಾ ಯೋಜನೆಯಡಿಯಲ್ಲಿ ಹಾಲಿ ನಿಂತಿರುವ ಬೆಳೆಗಳ ವಿವರಗಳು ಈ ರೀತಿ ಇದೆ :

೧)	ಎಡದಂಡೆ ನಾಲೆ	...	೨,೭೪,೦೦೦ ಎಕರೆ
೨)	ಬಲಂದಂಡೆ ನಾಲೆ	...	೭೩,೫೦೦ ,,
೩)	ವಿಜಯನಗರ ನಾಲೆಗಳು	...	೨೪,೧೯೦ ,,
			ಒಟ್ಟು ೩,೭೧,೬೯೦ ,,